# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

## ಶಿವಾಜಿನಗರ ವಿಭಾಗ, ಶಿವಾಜಿನಗರ ಉಪ-ವಿಭಾಗ

ದಿನಾಂಕ: 05-01-2019 ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಮಮತ ಶರವಣ, ಪಾಲಿಕೆ ಸದಸ್ಯರು ಹಾಗೂ ಅಧ್ಯಕ್ಷರು, ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ: 90 ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು:-

ಉಪಸ್ಥಿತರಿದ್ದ, ವಾರ್ಡ್ ಕಮಿಟಿ ಸದಸ್ಯರುಗಳು:-

| ಕ್ರ.ಸಂ | ಹೆಸರು | ಹುದ್ದೆ. |
|---|---|---|
| 1. | ಶ್ರೀಮತಿ ಮಮತ ಶರವಣ | ಅಧ್ಯಕ್ಷರು |
| 2. | ಶ್ರೀ ಧನರಾಜ್ | ಸದಸ್ಯರು |
| 3. | ಶ್ರೀ ಪರ್ಥಿಬನ್ | ಸದಸ್ಯರು |
| 4. | ಶ್ರೀಮತಿ ಶೀಲಾ | ಸದಸ್ಯರು |
| 5. | ಶ್ರೀಮತಿ ಈಶ್ವರಿ | ಸದಸ್ಯರು |
| 6. | ಶ್ರೀಮತಿ ಮಾಲತಿ | ಸದಸ್ಯರು. |
| 7. | ಶ್ರೀ ಕೃಷ್ಣ | ಸದಸ್ಯರು |
| 8. | ಶ್ರೀ ಹರಿಕೃಷ್ಣ | ಸದಸ್ಯರು |
| 9. | ಶ್ರೀ. ಪ್ರಕಾಶ್ | ಸದಸ್ಯರು |
| 10. | ಶ್ರೀ ಶಶಿಕಿರಣ್ | ಸದಸ್ಯರು |

ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿ ರವರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ. |
|---|---|---|
| 1 | ಶ್ರೀ ಕೆ. ಶಿವಕುಮಾರ್ | ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ) ಹಾಗೂ ಕಾರ್ಯದರ್ಶಿಗಳು, ವಾರ್ಡ್ ಸಂಖ್ಯೆ: 90ರ ಉಪ-ವಿಭಾಗ |
| 2 | ಶ್ರೀ ಸೈಫುದ್ದೀನ್ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಶಿವಾಜಿನಗರ) ವಿಭಾಗ |
| 3 | ಶ್ರೀ ಇಂದ್ರಜಿತ್ ಲಮಾಣಿ | ಕಂದಾಯ ಮೌಲ್ಯಮಾಪಕರು, ವಾರ್ಡ್ ಸಂಖ್ಯೆ: 90 |
| 4 | ಶ್ರೀ ಕೆ. ಆನಂದ್ ಕುಮಾರ್ | ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 90 |
| 5 | ಶ್ರೀ ಎನ್.ಹೆಚ್.ಕುಮಾರ್ | ಸಹಾಯಕ ಅಭಿಯಂತರರು (ಬೆಸ್ಕಾಂ) ವಿಭಾಗ |
| 6 | ಶ್ರೀ ಕೃಷ್ಣಮೂರ್ತಿ | ಮೇಸ್ತ್ರಿ (ತೋಟಗಾರಿಕೆ) ವಿಭಾಗ, ಬಿಬಿಎಂಪಿ |

ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ) ಹಾಗೂ ಕಾರ್ಯದರ್ಶಿಗಳು, ವಾರ್ಡ್ ಸಂಖ್ಯೆ: 90 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಹಾಗೂ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ವಾರ್ಡ್ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ತಿಳಿಸಲು ಸೂಚಿಸಿದರು. ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ವಿಷಯಗಳ ಈ ಕೆಳಗಿನ ಅಂಶಗಳ ಬಗ್ಗೆ ಚರ್ಚಿಸಲಾಯಿತು.

- ಎಂ.ಇ.ಜಿ.ಗೇಟ್ ಹತ್ತಿರ ಬ್ಲಾಕ್ ಸ್ಪಾಟ್ ನಿರ್ಮಾಣವಾಗಿದ್ದು, ಅದನ್ನು ತೆರವುಗೊಳಿಸಲು ಅಧ್ಯಕ್ಷರು ಸೂಚಿಸಿದರು.
- ಎಂ.ಜಿ.ರಸ್ತೆಯಲ್ಲಿ ಬೀದಿ ವ್ಯಾಪಾರಿಗಳ ಹಾವಳಿ ಜಾಸ್ತಿಯಾಗಿದ್ದು, ಅದರಿಂದ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಅವರನ್ನು ನಿಯಂತ್ರಿಸಲು ಹಾಗೂ ತೆರವುಗೊಳಿಸಲು ಸೂಚಿಸಿದರು.
- ಅಜಂತಾ ಚಿತ್ರಮಂದಿರದ ಎದುರುಗಡೆ ಖಾಸಗಿ ತೇರು ದಿನಾಲು ನಿಲ್ದಾಣ ಮಾಡುತ್ತಿದ್ದು, ಅದರಿಂದ ಸಾರ್ವಜನಿಕರಿಗೆ ಹಾಗೂ ಸಂಚಾರಕ್ಕೆ ತುಂಬಾ ತೊಂದರೆಯಾಗಿತ್ತಿದ್ದು, ತೆರವುಗೊಳಿಸಲು ಸೂಚಿಸಿದರು.

--2ನೇ ಪುಟಕ್ಕೆ

- ಹಲಸೂರು ಕೆರೆಯ ಪಾಲಿಕೆಯ ಸ್ವಿಮ್ಮಿಂಗ್ ಪೂಲ್ ಹತ್ತಿರ ಪಾದಚಾರಿ ಮಾರ್ಗದ ಮೇಲೆ ಶೂಸ್ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು, ಅದರಿಂದ ಸಾರ್ವಜನಿಕರಿಗೆ ಹಾಗೂ ಪಾದಚಾರಿ ರವರುಗಳಿಗೆ ತೊಂದರೆಯಾಗುತ್ತಿದ್ದು, ತೆರವುಗೊಳಿಸಲು ಸೂಚಿಸಿದರು.

- ಶ್ರೀ ಹಲಸೂರು ಸೋಮೇಶ್ವರ ದೇವಸ್ಥಾನದ ಬೀದಿ ರಥ ಸಾಗುವ ಬೀದಿಗಳನ್ನು ಸಂಪೂರ್ಣವಾಗಿ ಸುಜ್ಜಜಿತ ಹಾಗೂ ಶುಚಿತ್ವವಾಗಿ ನಿರ್ವಹಿಸಲು ಆದೇಶಿಸಿದರು.

- ಶ್ರೀ ಹಲಸೂರು ಸೋಮೇಶ್ವರ ದೇವಸ್ಥಾನದ ಕಲ್ಯಾಣಿ ಹತ್ತಿರ ಮನೆ ಕಟ್ಟಡ ನಿರ್ಮಿಸಿರುವುದನ್ನು ಪರಿಶೀಲಿಸಿ, ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿದಲ್ಲಿ, ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರಿಗೆ ಸೂಚಿಸಿದರು.

- ಪಳನಿ ಮೊದಲಿಯಾರ್ ಬೀದಿ ರಥ ಬೀದಿಯಾಗಿದ್ದು, ಮಾಂಸದ ಅಂಗಡಿಯನ್ನು ಸದರಿ ಬೀದಿಯಲ್ಲಿ ಅಳವಡಿಸಿರುವುದರಿಂದ, ಪೂರಾತನ ಕಾಲದಿಂದ ಈ ಬೀದಿಯು ರಥ ಬೀದಿಯಾಗಿದ್ದು, ಸದರಿ ಬೀದಿಯಲ್ಲಿರುವ ಮಾಂಸದ ಅಂಗಡಿಯನ್ನು ತಕ್ಷಣ ತೆರವುಗೊಳಿಸಿ, ಮುಂದಿನ ಸಭೆಯಲ್ಲಿ ಕ್ರಮದ ಬಗ್ಗೆ ವರದಿ ನೀಡಲು ಸೂಚಿಸಿದರು.

- ಸ್ವತ್ತಿನ. ಸಂಖ್ಯೆ: 61, ರಾಮಕೃಷ್ಣ ಮಠ ರಸ್ತೆ, ಈ ಸ್ವತ್ತು ಶ್ರೀ 'ರಾಜಾ ರಾವ್' ರವರ ಹೆಸರಿನಲ್ಲಿ ಪಾಲಿಕೆಯ ದಾಖಲಾತಿ ಪುಸ್ತದಲ್ಲಿ ಲಭ್ಯವಿರುವುದು ಕಂಡು ಬಂದಿದ್ದು, ಈ ಸ್ವತ್ತಿಗೆ ಯಾರು ಉತ್ತರಾಧಿಕಾರಿಗಳು ಇಲ್ಲದೇ ಇರುವುದರಿಂದ, ಈ ಸ್ವತ್ತಿನಲ್ಲಿ ಪ್ರಸ್ತುತ ವಾಸವಿರುವುವವರು ಅನಧಿಕೃತವಾಗಿ ವಾಸವಾಗಿರುವುದರಿಂದ, ಸದರಿಯವರನ್ನು ತೆರವುಗೊಳಿಸಿ ಸ್ವತ್ತನ್ನು ಪಾಲಿಕೆಯ ಸುಪರ್ದಿಗೆ ಪಡೆಯಲು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಶಿವಾಜಿನಗರ) ರವರಿಗೆ ಸೂಚಿಸಿವರು.

- ಹಲಸೂರು ವ್ಯಾಪ್ತಿಯಲ್ಲಿ ಬರುವ ಹಳೇ ತೇರು ಬೀದಿಯಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ನಿರ್ಮಿಸಿರುವ ಸ್ವತ್ತುಗಳನ್ನು ಪರಿಶೀಲಿಸಿ, ಕ್ರಮಕೈಗೊಳ್ಳಲು ಸೂಚಿಸಿದರು.

- ಕೆಲವು ಸ್ಥಳೀಯ ವ್ಯಕ್ತಿಗಳು ಹಲಸೂರು ವ್ಯಾಪ್ತಿಯಲ್ಲಿ ಅನಧಿಕೃತವಾಗಿ ರಸ್ತೆಯ ಅಗೆಯುವ ಕೆಲಸವನ್ನು ಮಾಡುತ್ತಿದ್ದು, ಅಂತಹವರ ವಿರುದ್ಧ ದೂರು ದಾಖಲಿಸಿ, ಕ್ರಮ ಕೈಗೊಳ್ಳಲು ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ)**

- ಶಿವಾಜಿನಗರ ವಲಯಕ್ಕೆ ಸಂಬಂಧಿಸಿದಂತೆ, ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) ರವರು ಅಂಗವಿಕಲರಾಗಿದ್ದು, ಶಿವಾಜಿನಗರ ವಲಯದಲ್ಲಿ ಘನತ್ಯಾಜ್ಯ ವಸ್ತುಗಳ ಉತ್ಪತಿ ಎಚ್ಚಾಗಿರುವುದರಿಂದ, ಸಮರ್ಪಕವಾಗಿ ಸದರಿಯವರಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ ಸದರಿಯವರ ಬದಲಿಗೆ ನಿಪುಣ ದಕ್ಷ ಅಧಿಕಾರಿಯನ್ನು ನಿಯೋಜಿಸಲು ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರಿಗೆ ವರದಿ ಮಂಡಿಸಲು ಸೂಚಿಸಿದರು.

**ಕ್ರಮ: ಜಂಟಿ ಆಯುಕ್ತರು (ಪೂರ್ವ) ರವರಿಗೆ**

- ವಾರ್ಡ್ ಸಂಖ್ಯೆ: 90, ಹಲಸೂರು ವ್ಯಾಪ್ತಿಯಲ್ಲಿ ಬೆಳಗಿನ ಜಾವ ಸರಗಳ್ಳರು ಹಾಗೂ ಇತರೇ ಕಳ್ಳತನದ ಹಾವಳಿ ಹೆಚ್ಚಾಗಿರುವುದರಿಂದ, ವಾರ್ಡ್ ವ್ಯಾಪ್ತಿಯಲ್ಲಿರುವ ಸ್ಟ್ರೀಟ್ ಲೈಟ್‌ಗಳನ್ನು ಬೆಳಗಿನ ಜಾವ ತಡವಾಗಿ ಬಂದು ಮಾಡಲು ಸೂಚಿಸಿದರು.

**ಕ್ರಮ: ಕಾರ್ಯಪಾಲಕ ಅಭಿಯಂತರರು(ವಿದ್ಯುತ್-ಪೂರ್ವ)**

--3ನೇ ಪುಟಕ್ಕೆ

- ಹಲಸೂರು ಕೆರೆಯ ಆರ್.ಬಿ.ಎನ್.ಎಮ್.ಎಸ್ ಕಾಲೇಜ್ ಎದುರುಗಡೆ ಪಾರ್ಕ್ ಆವರಣದಲ್ಲಿ ಮಕ್ಕಳ ಆಟದ ಸಲಕರಣೆಗಳನ್ನು ಹಾಗೂ ವ್ಯಾಯಾಮ ಸಲಕರಣೆಗಳನ್ನು ಅಳವಡಿಸಲು ಸೂಚಿಸಿದರು.

**ಕ್ರಮ: ಅಧೀಕ್ಷಕರು (ತೋಟಗಾರಿಕೆ), ಬಿಬಿಎಂಪಿ**

- ವಾರ್ಡ್ ಸಂಖ್ಯೆ: 90ರಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು, ಇವುಗಳಿಂದ ಹಿರಿಯ ನಾಗರೀಕರಿಗೆ ಹಾಗೂ ಮಕ್ಕಳಿಗೆ ತೊಂದರೆಗಳಾಗುತ್ತಿದ್ದು, ಇವುಗಳನ್ನು ನಿಯಂತ್ರಿಸಲು ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಪಶುಸಂಗೋಪನೆ ಇಲಾಖೆ)**

ಈ ಸಭೆಯಲ್ಲಿ ಚರ್ಚಿಸಲಾದ ಮೇಲ್ಕಂಡ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟ ಅಧಿಕಾರಿ ನೌಕರರು ತೆಗೆದುಕೊಂಡ ಸೂಕ್ತ ಕ್ರಮ ಹಾಗೂ ಕಾರ್ಯರೂಪಕ್ಕೆ ತಂದಿರುವ ಬಗ್ಗೆ ವರದಿಯನ್ನು ನೀಡಲು ಸೂಚಿಸಿ ಹಾಗೂ ಡಿಸೆಂಬರ್–2018ರ ಮಾಹೆಯ ಸಮಿತಿಯಲ್ಲಿ ಚರ್ಚಿಸಿದಂತಹ ಸಮಸ್ಯೆಗಳ ಬಗ್ಗೆ ತೆಗೆದುಕೊಂಡ ಕ್ರಮದ ವರದಿಯೊಂದಿಗೆ ಮುಂದಿನ ವಾರ್ಡ್ ಸಮಿತಿಗೆ ಹಾಜರಾಗಲು ಮಾನ್ಯ ಅಧ್ಯಕ್ಷರು ರವರು ಸೂಚಿಸಿದರು ಹಾಗೂ ಕಾರ್ಯದರ್ಶಿಯವರು ಸಭೆಗೆ ಹಾಜರಾದ ಎಲ್ಲರಿಗೂ ವಂದನಾರ್ಪಣೆಗಳನ್ನು ತಿಳಿಸುತ್ತಾ, ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

S. Mamatha

**(ಮಮತಾ ಶರವಣ)**
ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ಮಾನ್ಯ ನಗರ ಪಾಲಿಕೆ ಸದಸ್ಯರು,
ವಾರ್ಡ್ ಸಂಖ್ಯೆ: 90, ಹಲಸೂರು

*Mamatha Saravana*
**Corporator**
Ward 90, Halasuru
Bengaluru - 560 008.

<u>ಪ್ರತಿಯನ್ನು</u>:
1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2. ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಲಾಗಿದೆ.
3. ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಲಾಗಿದೆ.
4. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ.
6. ಜಂಟಿ ಆಯುಕ್ತರು (ಆರೋಗ್ಯ) ರವರ ಅವಗಾಹನೆಗೆ ಕಳುಹಿಸಲಾಗಿದೆ.
7. ಉಪ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಕಳುಹಿಸಲಾಗಿದೆ.
8. ಸಮಿತಿಯ ಎಲ್ಲಾ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.
9. ಕಾರ್ಯದರ್ಶಿ ಮತ್ತು ಸಂಚಾಲರು, ವಾರ್ಡ್ ಸಂಖ್ಯೆ: 90 ರವರ ಅವಗಾಹನೆಗಾಗಿ ಕಳುಹಿಸಿದೆ.
10. ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿ/ನೌಕರರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.